ದಿನಾಂಕಃ 06.08.2025 ರಂದು ಡಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ ಪಿ ಯು ವಕೀಲರಿಂದಃ**

1. ನನ್ನ ಮದುವೆ 1992 ರಲ್ಲಿ ಆಗಿರುತ್ತದೆ. ಹಳೇ ಆಲೂರಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ. ಈಗಲೂ ನಾನು ಅಲ್ಲೇ ವಾಸ ಇರುತ್ತೇನೆ.ಯಾವ ದಿನಾಂಕ ನನ್ನ ಹೆಸರಿಗೆ ಮರಣಶಾಸನ ಆಗಿರುತ್ತದೆ ಎಂದರೆ 08-12-2008 ರಲ್ಲಿ. ಸದರಿ ದಿನಾಂಕದಂದು ನನ್ನ ಅಜ್ಜಿ ನನ್ನೊಂದಿಗೆ ವಾಸವಾಗಿದ್ದರು. ನನ್ನೊಂದಿಗೆ ನನ್ನ ಅಜ್ಜಿ ಎಷ್ಟು ವರ್ಷ ವಾಸವಾಗಿದ್ದರು ಎಂದರೆ ನನ್ನ ಮದುವೆಯಾದ ಕಾಲದಿಂದಲೂ ಮರಣಹೊಂದುವ ವರೆಗೂ ನನ್ನೊಂದಿಗೆ ಇದ್ದರು. ಯಾವ ದಿನಾಂಕ ನನ್ನ ಅಜ್ಜಿ ಮರಣಹೊಂದಿರುತ್ತಾರೆ ಎಂದರೆ ದಿಃ 30-01-2018. ನನ್ನ ಮನೆಯಲ್ಲೇ ಮರಣಹೊಂದಿರುತ್ತಾರೆ. ನನ್ನ ಕುಟುಂಬದ ಪಡಿತರ ಚೀಟಿಯಲ್ಲಿ ನನ್ನ ಅಜ್ಜಿಯನ್ನು ನೊಂದಾಯಿಸಿರುತ್ತೇನೆಯೇ ಎಂದರೆ ಇಲ್ಲ. 1992 ರಿಂದ 2018 ರವರೆಗೂ ನನ್ನ ಅಜ್ಜಿ ನನ್ನ ಕುಟುಂಬದಲ್ಲೇ ಇರುತ್ತಾರೆ ಎಂದು ಪಡಿತರ ಚೀಟಿಯಲ್ಲಿ ಸೇರಿಸಲು ತೊಂದರೆ ಇತ್ತಾ ಎಂದರೆ ಇಲ್ಲ. ನನ್ನ ಅಜ್ಜಿ ನನ್ನ ಮನೆಯಲ್ಲೆ ಮರಣಹೊಂದಿರುತ್ತಾರೆ ಎಂದು ಪಂಚಾಯತಿಗೆ ಮಾಹಿತಿ ನೀಡಿರುತ್ತೀರಾ ಎಂದರೆ ನೀಡಿರುತ್ತೇನೆ. ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರವನ್ನು



ಹಾಜರುಪಡಿಸಿರುತ್ತೇನೆ. ನಿಪಿ-5 ರಲ್ಲಿ ನನ್ನ ಅಜ್ಜಿ ಅನಿಗಳಲೆ ಗ್ರಾಮದಲ್ಲಿ ಗ್ರಾಮಪಂಚಾಯತಿಯಲ್ಲಿ ಅವರ ಮರಣ ದಾಖಲಾಗಿರುತ್ತದೆ ಎಂದರೆ ಸರಿ. ವಾದಿ ಅನಿಗಳಲೆ ಗ್ರಾಮದಲ್ಲಿ ಖಾಯಂ ವಿಳಾಸ ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿರುವ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ. ನಿಡಿ-2 ರ ಪ್ರಕಾರ ದಿಃ 17-10-2001 ರಂದು ನನ್ನ ಅಜ್ಜಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮರಣ ಶಾಸನ ಪತ್ರವನ್ನು ವಾದಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಿಡಿ-4 ದಿಃ 08-12-2008 ಮರಣ ಶಾಸನ ಪತ್ರ ಆಗುವ ಮುನ್ನ ನನ್ನ

ಅಜ್ಜ ವಾದಿಗೆ ಮಾಡಿಕೊಟ್ಟಿರುವ ಮರಣ ಶಾಸನ ಬಗ್ಗೆ ನನಗೆ ತಿಳಿಸಿರುತ್ತಾರಾ ಎಂದರೆ ಹೌದು. ನಿಡಿ-2 ಮರಣ ಶಾಸನ ಪತ್ರ ಆಗಿರುವ ಬಗ್ಗೆ ವಾದಿಗೆ ನನ್ನ ಅಜ್ಜ ತಿಳಿಸಿರುತ್ತಾರಾ ಎಂದರೆ ತಿಳಿಸಿರುತ್ತಾರೆ, ನಿಡಿ-2 ರದ್ದಾಗಿರುತ್ತದೆ. ನಿಡಿ-2 ರದ್ದಾಗಿರುವ ಬಗ್ಗೆ ಪತ್ರ ಆಗಿರುತ್ತದೆಯೇ ಎಂದರೆ ಆಗಿರುತ್ತದೆ. ನಿಡಿ-2 ನ್ನು ರದ್ದುಪಡಿಸುವಾಗ ನನ್ನನ್ನು ನನ್ನ ಅಜ್ಜ ನೊಂದಣಿ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರಾ ಎಂದರೆ ಇಲ್ಲ. ನಿಡಿ-2 ಆದ ಎರಡು ವರ್ಷದ ನಂತರ 2003 ರಲ್ಲಿ ರದ್ದು ಮಾಡಿರುತ್ತಾರೆ. ನಿಡಿ-2 ರದ್ದಾದ ಎಷ್ಟು ವರ್ಷದ ನಂತರ ನನ್ನ ಹೆಸರಿಗೆ ಮರಣ ಶಾಸನ ಪತ್ರ ಮಾಡಿರುತ್ತಾರೆ ಎಂದರೆ 5 ವರ್ಷ. ಮರಣ ಶಾಸನ ಪತ್ರ ರದ್ದಾಗಿರುವ ಬಗ್ಗೆ ದಾಖಲಾತಿಯನ್ನು ನನಗೆ ನೀಡಿರುತ್ತಾರಾ ಎಂದರೆ ನೀಡಿರುತ್ತಾರೆ, ಅದನ್ನು ಹಾಜರುಪಡಿಸಿರುತ್ತೇನೆ. ನಿಡಿ-4 ಆಗುವ



ಸಮಯದಲ್ಲಿ ನನ್ನನ್ನು ನನ್ನ ಅಜ್ಜ ನೊಂದಣಿ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರಾ ಎಂದರೆ ಇಲ್ಲ. ನಿಡಿ-4 ಆದ ದಿನಂಾಕ ನನ್ನ ಅಜ್ಜ ನಿಡಿ-4 ನ್ನು ಮಾಡಿರುವ ಬಗ್ಗೆ ನನಗೆ ಮಾಹಿತಿ ನೀಡಿರುತ್ತಾರಾ ಎಂದರೆ ಹೌದು. ನಿಡಿ-2 ರದ್ದು ಮಾಡಿರುವ ಪತ್ರವನ್ನು ನೊಂದಣಿ ಕಛೇರಿಗೆ ನಿಡಿ-4 ನ್ನು ಮಾಡುವಾಗ ತೆಗೆದುಕೊಂಡು ಹೋಗಿರುತ್ತಾರಾ ಎಂದರೆ ಹೌದು.

2. ನಿಡಿ-4 ನ್ನು ಯಾರು ಬರೆದಿರುತ್ತಾರೆ ಎಂದರೆ ಲಕ್ಷ್ಮೀಕಾಂತ ವಕೀಲರು. ಸದರಿ ವಕೀಲರು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ದಾವೆಗಳನ್ನು ನಡೆಸಿರುತ್ತಾರೆ ಎಂದರೆ ಸರಿ. ಸದರಿ ವಕೀಲರು ನನ್ನ ಅಜ್ಜ ಪರವಾಗಿ ಯಾವುದಾದರೂ ದಾವೆ ನಡೆಸಿದ್ದಾರಾ ಎಂದರೆ ಇಲ್ಲ. ಸದರಿ ವಕೀಲರ ಬಳಿ ಮರಣ ಶಾಸನ ಪತ್ರ ಮಾಡಿಸಬೇಕು ಎಂದು ನನ್ನ ಅಜ್ಜಗೆ ಯಾರು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-4 ನ್ನು ಬರೆಸುವಾಗ ನನ್ನ ಅಜ್ಜ ಯಾವ ಯಾವ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-4 ನ್ನು ಬರೆಸುವಾಗ ನನಗೆ ಸಂಬಂಧಪಟ್ಟ ದಾಖಲಾತಿಯನ್ನು ತೆಗೆದುಕೊಂಡು ಹೋಗಿರುತ್ತಾರಾ ಎಂದರೆ ಇಲ್ಲ. ನಿಡಿ-4 ರಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ.

3. ನಿಡಿ-4 ರಲ್ಲಿ ದಿಃ 17-10-2001 ರಲ್ಲಿ ಮಾಡಿರುವ ಮರಣಶಾಸನ ಪತ್ರವನ್ನು ರದ್ದುಮಾಡಿರುವ ಬಗ್ಗೆ ನಮೂದು ಇದೆಯೇ ಎಂದರೆ ಇರುತ್ತದೆ.



ನಿಡಿ-4 ರಲ್ಲಿ ನಿಡಿ-2 ರದ್ದಾಗಿರುವ ಬಗ್ಗೆ ನಮೂದುಸಿರುವುದಿಲ್ಲ ಎಂದರೆ ಸರಿ. ನಿಡಿ-2 ರ ಬಗ್ಗೆ ನಮೂದಾಗಿರುವುದಿಲ್ಲ ಎಂದು ನಾನು ನನ್ನ ಅಜ್ಜಿಗೆ ತಿಳಿಸಿರುತ್ತೇನೆಯೇ ಎಂದರೆ ಇಲ್ಲ. ನಿಡಿ-4 ನ್ನು ಓದಿ ತಿಳಿದುಕೊಂಡಾಗ ನಿಡಿ-2 ರದ್ದಾಗಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಸದರಿ ನಿಡಿ-2 ರದ್ದಾಗಿರುವ ವಿಚಾರ ನಮೂದಾಗಿರುವುದಿಲ್ಲ ಎಂದು ಹೊಸ ಮರಣ ಶಾಸನ ಪತ್ರ ಬರೆಯುವಂತೆ ನನ್ನ ಅಜ್ಜಿಯನ್ನು ಕೇಳಿರುತ್ತೇನೆಯೇ ಎಂದರೆ ಇಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

sd/-

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.